**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>**

**<u>Spl.C. 299/2020</u>**

**<u>P.W.- 5</u>**
**<u>C.W.-26</u>**

| | | |
|---|---|---|
| ಹೆಸರು | : | ನಿರಂಜನ್ ಕೆ ಎಸ್ |
| ತಂದೆಯ ಹೆಸರು | : | ಶಿವಪ್ಪ ಕೆ ಆರ್ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಪೊಲೀಸ್ ಇನ್ಸ್ ಪೆಕ್ಟರ್ |
| ವಾಸಸ್ಥಳ | : | ಮಂಡ್ಯ |

**<u>ದಿನಾಂಕಃ 08.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –</u>**

2. ನಾನು ದಿ.30.08.2019 ರಿಂದ 04.06.2021 ರವರೆಗೆ ನಾನು ಎಸಿಬಿ ಪೊಲೀಸ್ ಠಾಣೆ, ಮೈಸೂರಿನಲ್ಲಿ ಪೊಲೀಸ್ ಇನ್ಸ್ ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

3. ದಿ.15.09.2019 ರಂದು ಪ್ರಕರಣದ ಕಡತವನ್ನು ಚಾಸಾ.24 ರವರಿಂದ ಪಡೆದುಕೊಂಡು ಕಡತಗಳನ್ನು ಪರಿಶೀಲನೆ ಮಾಡಿ, ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ.

4. ದಿ.16.09.2019 ರಂದು ಪ್ರಕರಣದ ತನಿಖೆ ಸಲುವಾಗಿ ಹಾಜರಾಗುವಂತೆ ಎ ಜಿ ಒ ಮಣಿಕಂಠರವರಿಗೆ ನೋಟೀಸ್ ನೀಡಿರುತ್ತೇನೆ. ಅದರಂತೆ ದಿ.18.09.2019 ರಂದು 1 ನೇ ಆರೋಪಿ ನನ್ನ ಮುಂದೆ ಹಾಜರಾಗಿ, ತಾವು ಉಪಯೋಗಿಸುತ್ತಿದ್ದ ಮೊಬೈಲ್ ನಂಬರ್

7353407224 ನಂಬರ್ ನ **CAF** ನ್ನು ನೋಡಿ ಸದರಿ ಸಿಮ್ ನಂಬರ್ ತನ್ನ ತಾಯಿ ಶ್ರೀಮತಿ ನೀಲವ್ವ ಹೊಂದೂರು ಮಟ್ ರವರ ಹೆಸರಿನಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ಸಾಕ್ಷಿಯೂ ದಿ.16.09.2019 ರ 1 ನೇ ಆರೋಪಿಗೆ ನೀಡಿದ ನೋಟಿಸ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.26(ಪುಟ ಸಂಖ್ಯೆ 232) ಎಂದು, ಸಾಕ್ಷಿಯ ಸಹಿಯನ್ನು ನಿಪಿ.26(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ 1 ನೇ ಆರೋಪಿಯ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ.27(ಪುಟ ಸಂಖ್ಯೆ 233), ಸಾಕ್ಷಿಯ ಸಹಿಯನ್ನು ನಿಪಿ.27(ಎ)ಎಂದು ಗುರುತಿಸಲಾಯಿತು.

5. ದಿ.24.10.2019 ರಂದು ಪ್ರಕರಣದ ತನಿಖೆಯ ಸಲುವಾಗಿ ತಹಶೀಲ್ದಾರ್ ನಂಜನಗೂಡುರವರು 1 ಮತ್ತು 2 ನೇ ಆರೋಪಿ ರವರ ಕರ್ತವ್ಯದ ಸಂಬಂಧ ಮಾಹಿತಿ ಮತ್ತು ಅದರ ಕುರಿತಾದ ದೃಡೀಕೃತ ದಾಖಲಾತಿಗಳನ್ನು ನೀಡಿದ್ದು, ಅವುಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯೂ ದಿ.15.10.2019 ರ ತಹಶೀಲ್ದಾರ್ ರವರ ಪತ್ರ ಮತ್ತು 1 ಮತ್ತು 2 ನೇ ಆರೋಪಿತರಿಗೆ ಸಂಬಂಧಿಸಿದ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಒಟ್ಟಾರೆಯಾಗಿ ಅವುಗಳನ್ನು ನಿಪಿ.28(ಪುಟ ಸಂಖ್ಯೆ 233(ಎ) ರಿಂದ 233(ಬಿ ಬಿ)) ಎಂದು, ಸಾಕ್ಷಿಯ ಸಹಿಯನ್ನು ನಿಪಿ.28(ಎ) ಎಂದು ಗುರುತಿಸಲಾಯಿತು.

6. ದಿ.05.11.2019 ರಂದು ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಆರೋಪಿತರ ಸಕ್ಷಮ ಪ್ರಾಧಿಕಾರ ರವರಾದ ತಹಶೀಲ್ದಾರ್, ನಂಜನಗೂಡು ರವರಿಂದ ಅಭಿಯೋಜನಾ ಮಂಜೂರಾತಿ ಆದೇಶ ಕೊಡಿಸಿಕೊಡಲು, ಮಾನ್ಯ ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ ರವರ ಮೂಲಕ ಪತ್ರ ವ್ಯವಹರಿಸಿರುತ್ತೇನೆ.

7. ನಂತರ ದಿ.02.06.2020 ರಂದು ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ ಮೈಸೂರು ರವರ ಮುಖಾಂತರ 1 ನೇ ಆರೋಪಿಯ ವಿರುದ್ಧ ಅಭಿಯೋಜನಾ ಮಂಜೂರಾತಿ ಆದೇಶವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯೂ ದಿ.30.05.2020 ರ ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ ಮೈಸೂರು ರವರ ಜ್ಞಾಪನವನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ.29 (ಪುಟ ಸಂಖ್ಯೆ 14) ಎಂದು, ಸಾಕ್ಷಿಯ ಸಹಿಯನ್ನು ನಿಪಿ.29(ಎ) ಎಂದು ಗುರುತಿಸಲಾಯಿತು.

8. ನಂತರ ಪ್ರಕರಣದ ತನಿಖೆಯನ್ನು ಚಾಸಾ.27 ರವರಿಗೆ ವಹಿಸಿ, ಕಡತಗಳನ್ನು ಹಸ್ತಾಂತರಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿಗಳ ಪರ ವಕೀಲರಿಂದಃ –**

9. 1 ನೇ ಆರೋಪಿಗೆ ನೋಟೀಸ್ ನೀಡಿ, ನಂತರ ನಿಪಿ.27 ರಂತೆ 1 ನೇ ಆರೋಪಿಯ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಹೇಳಿದ್ದು, ಸದರಿ ಹೇಳಿಕೆಯು ಕಲಂ 161 ಸಿ ಆರ್ ಪಿ ಸಿ ಅಡಿಯ ಹೇಳಿಕೆಯಾಗಿರುತ್ತದೆ ಎಂದರೆ ಸರಿ. ಸದರಿಯವರ ಹೇಳಿಕೆ ಪ್ರಕಾರ ಸದರಿ ಸಿಮ್ ಶ್ರೀಮತಿ ನೀಲವ್ವ ಹೊಂದೂರು ಮಟ್ ರವರ ಹೆಸರಿನಲ್ಲಿ ಇರುವುದು ಕಂಡು ಬಂದಾಗ ಅವರನ್ನು ಕರೆಸಿ, ವಿಚಾರಿಸಿರುತ್ತೀರಿಯೇ ಮತ್ತು ಸದರಿ ಸಿಮ್ ನ್ನು 1 ನೇ ಆರೋಪಿಗೆ ನೀಡಿದರ ಬಗ್ಗೆ ತನಿಖೆ ಮಾಡಿರುತ್ತಿರಿಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ನಾನು ಒಂದು ವರದಿಯನ್ನು ಬಿಟ್ಟು ಪ್ರಕರಣದ ಬೇರೆ ಯಾವುದೇ ದಾಖಲೆಗಳನ್ನು ಅಭಿಯೋಜನಾ ಮಂಜೂರಾತಿಗೆ ಕಳುಹಿಸಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**Spl.C.No.299/20**
**P.W.-5**
**C.W.-26**

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು,
ಮೈಸೂರು.